## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ದಿನಾಂಕ 21–05–1998ರ ಅಧಿಸೂಚನೆ ಸಂಖ್ಯೆ ಡಿಪಿಎಆರ್ 31 ಎಸ್‌ಆರ್‌ಇ 1994ರಲ್ಲಿ ಒಳಗೊಂಡ ತಿದ್ದುಪಡಿ ನಿಯಮಗಳ ಪ್ರಕಾರ ನಿಗದಿಪಡಿಸಲಾದ.

"Diploma in Drawing and Painting Examination or Art Master Examination conducted by Government". ಈವಿದ್ಯಾರ್ಹತೆಯನ್ನು ಹೊಂದಿರುವ ಖಾಸಗಿ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿನ ಚಿತ್ರಕಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಪರಿಷ್ಕರಿಸಿದ ವೇತನ ಶ್ರೇಣಿಯನ್ನು ನಿಗದಿಪಡಿಸಿರುವ ಬಗ್ಗೆ

ಓದಲಾಗಿದೆ : 1) ದಿನಾಂಕ : 21–05–98ರ ಸರ್ಕಾರಿ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 31 ಎಸ್‌ಆರ್‌ಇ 94.

2) ದಿನಾಂಕ : 26–05–2000ದ ಸರ್ಕಾರಿ ಆದೇಶ ಸಂಖ್ಯೆ : ಇಡಿ 185 ಎಸ್‌ಎಲ್‌ಬಿ 1999.

ಪ್ರಸ್ತಾವನೆ :

1) ಮೇಲೆ (1)ರಲ್ಲಿ ಓದಲಾದ ದಿನಾಂಕ 21–05–1998ರ ಅಧಿಸೂಚನೆಯಲ್ಲಿ ಒಳಗೊಂಡ ತಿದ್ದುಪಡಿ ನಿಯಮಗಳ ಪ್ರಕಾರ, ಚಿತ್ರಕಲಾ ಶಿಕ್ಷಕರ ವೃಂದದಲ್ಲಿನ ಹುದ್ದೆಗಳಿಗೆ ನೇಮಕಾತಿಗಾಗಿ ಈ ಕೆಳಗೆ ಉದ್ಧರಿಸಿದಂತೆ, ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿದೆ.

1) " Must have passed.

a) S.S.L.C. examination conducted by Government or equivalent examination recognised by Government.

b) Diploma in Drawing and paining examination or Art Master Examination conducted by Government or equivalent examinatin recognised by Government."

ನಂತರ ಮೇಲೆ (2) ರಲ್ಲಿ ಓದಲಾದ ದಿನಾಂಕ 26–05–2000ದ ಆದೇಶದನ್ವಯ ಸರ್ಕಾರಿ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಈ ಕೆಳಗೆ ಉದ್ಧರಿಸಿದಂತೆ ಆದೇಶಿಸಲಾಗಿದೆ :–

"ಸರ್ಕಾರಿ ಅಧಿಸೂಚನೆ ಸಂಖ್ಯೆ : ಡಿಪಿಎಆರ್ 31 ಎಸ್‌ಆರ್‌ಇ 1994, ದಿನಾಂಕ 21–05–1998ರಲ್ಲಿ ಪರಿಷ್ಕೃತಗೊಂಡ ವೃಂದ ಮತ್ತು ನೇಮಕಾತಿ ನಿಯಮಗಳಡಿಯಲ್ಲಿ ನಿಗಧಿಪಡಿಸಲಾದ ಡಿಪ್ಲೋಮ ಇನ್ ಡ್ರಾಯಿಂಗ್ ಆಂಡ್ ಪೇಟಿಂಗ್ ಅಥವಾ ಆರ್ಟ್ ಮಾಸ್ಟರ್ ಸರ್ಟಿಫಿಕೇಟ್ ಅಥವಾ ತತ್ಸಮಾನ ವಿದ್ಯಾರ್ಹತೆಯ ಚಿತ್ರಕಲಾ ಶಿಕ್ಷಣ ವೃಂದಕ್ಕೆ ರೂ. 4,575–8,400 ವೇತನ ಶ್ರೇಣಿಯನ್ನು ನಿಗದಿಪಡಿಸಲಾಗಿದೆ."

2) ಉನ್ನತ ವೇತನ ಶ್ರೇಣಿಯ ಸದರಿ ಸೌಲಭ್ಯವನ್ನು ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚಿತ್ರಕಲಾ ಶಿಕ್ಷಕರಿಗೆ ವಿಸ್ತರಿಸುವ ಬಗ್ಗೆ ಸರ್ಕಾರ ಪರಿಶೀಲಿಸಿ, ಈ ಕೆಳಕಂಡಂತೆ, ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಇಡಿ 99 ಎಸ್‌ಎಲ್‌ಬಿ 2004

ಬೆಂಗಳೂರು, ದಿನಾಂಕ : 03ನೇ ಫೆಬ್ರವರಿ 2007.

03) ದಿನಾಂಕ : 21–05–1998ರ ಸದರಿ ಅಧಿಸೂಚನೆಯಲ್ಲಿ ಒಳಗೊಂಡ ತಿದ್ದುಪಡಿ ನಿಯಮಗಳ ಪ್ರಕಾರ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ, "Diploma in Drawing and Painting Examination or Art Master Examination conducted by Government", ಈ ವಿದ್ಯಾರ್ಹತೆಯನ್ನು ಹೊಂದಿದ ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿನ ಚಿತ್ರಕಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ರೂ. 4,575–8,400 ವೇತನ ಶ್ರೇಣಿಯನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಈ ಮೂಲಕ ಭವಿಷ್ಯವರ್ತಿಯಿಂದ ನಿಗದಿಪಡಿಸಲಾಗಿದೆ.

04) ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ : 22–11–2006ರ ಟಿಪ್ಪಣಿ ಸಂಖ್ಯೆ : ಎಫ್‌ಡಿ 790 ವೆಚ್ಚ – 8/ 2006ರನ್ವಯ ನೀಡಿದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–**ಸಿದ್ದಲಿಂಗಯ್ಯ**
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ